# ಮಹಿಳಾ ಸಬಲೀಕರಣಕ್ಕೆ ಡಾ. ಬಿ. ಆರ್. ಅಂಬೇಡ್ಕರ್ ರವರ ಕೊಡುಗೆ

ಪರಮೇಶ್ವರ ಶಂಕ್ರಪ್ಪ ಕಾಳೆ* & ಸಂಗೀತಾ ಮಾನೆ**

DOI: https://doi.org/10.5281/zenodo.19637982

**ABSTRACT**

ಭಾರತೀಯ ಸಂವಿಧಾನದ ಪಿತಾಮಹರೆನಿಸಿದ ಡಾ. ಭೀಮರಾವ್ ರಾಮ್ ಜಿ ಅಂಬೇಡ್ಕರ್ (1891–1956) ರವರು ಓರ್ವ ಮಹಾನ್ ನ್ಯಾಯಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ ಹಾಗೂ ಒಟ್ಟಾರೆಯಾಗಿ ಜಗತ್ತು ಕಂಡ ಮಹಾನ್ ಸುಧಾರಕರು ಆಗಿದ್ದರು. ಅದಲ್ಲದೆ ಆಧುನಿಕ ಭಾರತದಲ್ಲಿ ಮಹಿಳಾ ಹಕ್ಕುಗಳ ಪ್ರಮುಖ ಪ್ರತಿಪಾದಕರಲ್ಲಿ ಒಬ್ಬರಾಗಿ ಮಹಾನ್ ಸ್ತ್ರೀವಾದಿ ಎನಿಸಿಕೊಂಡರು; ಸಮಾನತೆ, ಪ್ರಜಾಪ್ರಭುತ್ವ ಮತ್ತು ನ್ಯಾಯದ ಅವರ ದೃಷ್ಟಿಕೋನವು ಭಾರತೀಯ ಮಹಿಳೆಯರ ನೈಜ ಸ್ವಾತಂತ್ರ್ಯಕ್ಕೆ ಕಾರಣವಾಯಿತು. ಧರ್ಮ ಮತ್ತು ಸಮಾಜದಲ್ಲಿ ಹುದುಗಿರುವ ಮನುವಾದವನ್ನು ಹಾಗೂ ಪಿತೃ ಪ್ರಧಾನ ಸಂಪ್ರದಾಯಗಳನ್ನು ಅಂಬೇಡ್ಕರ್ ಪ್ರಶ್ನಿಸಿದರು, ಮಹಿಳೆಯರ ಶಿಕ್ಷಣ, ಕಾರ್ಮಿಕ ಹಕ್ಕುಗಳು ಮತ್ತು ಆಸ್ತಿ ಮಾಲೀಕತ್ವಕ್ಕಾಗಿ ಹೋರಾಡಿದರು ಮತ್ತು ಭಾರತೀಯ ಸಂವಿಧಾನದಲ್ಲಿ ಲಿಂಗ ಸಮಾನತೆಯನ್ನು ಪ್ರತಿಷ್ಠಾಪಿಸಿದರು. ಆದ್ದರಿಂದ ಈ ಪ್ರಬಂಧವು ಡಾ. ಬಿ. ಆರ್. ಅಂಬೇಡ್ಕರ್ ರವರ ಬರಹಗಳು, ಶಾಸಕಾಂಗ ಪ್ರಯತ್ನಗಳು ಮತ್ತು ಸಾಂವಿಧಾನಿಕ ತತ್ವಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಅವರ ಬಹು ಆಯಾಮದ ಕೊಡುಗೆಗಳನ್ನು ಪರಿಶೋಧಿಸುತ್ತದೆ ಮತ್ತು ಇಂದಿನ ಆಧುನಿಕ ಭಾರತದಲ್ಲಿ ಅವುಗಳ ಪ್ರಸ್ತುತತೆಯನ್ನು ನಿರ್ಣಯಿಸುತ್ತದೆ.

**KEYWORDS:** ಡಾ. ಬಿ. ಆರ್. ಅಂಬೇಡ್ಕರ್, ಮಹಿಳಾ ಸಬಲೀಕರಣ, ಹಿಂದೂ ಕೋಡ್ ಬಿಲ್, ಲಿಂಗ ಸಮಾನತೆ, ಸಾಂವಿಧಾನಿಕ ಹಕ್ಕುಗಳು.

* **ಪರಮೇಶ್ವರ ಶಂಕ್ರಪ್ಪ ಕಾಳೆ,** ಸಂಶೋಧನಾ ವಿದ್ಯಾರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಡಾ. ಸಂಗೀತಾ ಮಾನೆ,** ಸಂಶೋಧನಾ ಮಾರ್ಗದರ್ಶಕರು ಮತ್ತು ಮುಖ್ಯಸ್ಥರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪೀಠಿಕೆ**

ಆಧುನಿಕ ಭಾರತವನ್ನು ರೂಪಿಸುವಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರ ಪಾತ್ರವು ಬಹಳ ಪ್ರಮುಖವಾದದ್ದು. ಹುಟ್ಟಿನಿಂದ ಜಾತಿ ತಾರತಮ್ಯದ ಅಸ್ಪೃಶ್ಯತೆಯಂತಹ ಕ್ರೂರ ಆಚರಣೆಗಳಿಗೆ ಬಲಿಯಾಗಿ ಅನುಭವಿಸುತ್ತಾ ಬೆಳೆದ ಅವರು, ಮುಂದೆ ಅವರ ಬೌದ್ಧಿಕ, ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳು ಅಂಚಿನಲ್ಲಿರುವ ಸಮುದಾಯಗಳು ಮತ್ತು ಮಹಿಳೆಯರ ವ್ಯವಸ್ಥಿತ ದಬ್ಬಾಳಿಕೆಯನ್ನು ಪರಿಹರಿಸಿದವು. ಜಾತಿ, ವರ್ಗ ಮತ್ತು ಲಿಂಗ ಶ್ರೇಣಿಗಳಿಂದ ಆಳವಾಗಿ ವಿಭಜಿಸಲ್ಪಟ್ಟ ಸಮಾಜದಲ್ಲಿ ಮಹಿಳೆಯರ ವಿಮೋಚನೆ ಇಲ್ಲದೆ ನಿಜವಾದ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಗುರುತಿಸಿದರು. "ಮಹಿಳೆಯರು ಸಾಧಿಸಿದ ಪ್ರಗತಿಯ ಮಟ್ಟದಿಂದ ನಾನು ಸಮುದಾಯದ ಪ್ರಗತಿಯನ್ನು ಅಳೆಯುತ್ತೇನೆ" ಎಂದು ಅವರು ಘೋಷಿಸಿದರು (1916). ಈ ಪ್ರತಿಪಾದನೆಯು ಲಿಂಗ ಸಮಾನತೆಗಾಗಿ ಅವರ ಅಜೀವ ಹೋರಾಟದ ತಾತ್ವಿಕ ಅಡಿಪಾಯವನ್ನು ರೂಪಿಸುತ್ತದೆ.

**ಅಂಬೇಡ್ಕರ್ ಪೂರ್ವ ಭಾರತೀಯ ಮಹಿಳೆಯರ ಸ್ಥಿತಿಗತಿ**

ಭಾರತದ ಇತಿಹಾಸವನ್ನು ತೆಗೆದು ನೋಡಿದರೆ ಅಂಬೇಡ್ಕರ್ ಪೂರ್ವದ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಕೆಳಜಾತಿಗಳಲ್ಲಿ ಮಹಿಳೆಯರ ಸ್ಥಿತಿಗತಿ ತುಂಬಾ ಕೀಳಾಗಿತ್ತು; ತೀವ್ರ ಸಾಮಾಜಿಕ ಮತ್ತು ಆರ್ಥಿಕ ದಬ್ಬಾಳಿಕೆಯನ್ನು ಅವರು ಅನುಭವಿಸಿದರು. ಅಂದಿನ ವೇದಗಳ ಕಾಲದಲ್ಲಿ ನನಗೆ ತಿಳಿದಿರುವಂತೆ ಪೂರ್ವ ವೇದ ಕಾಲದಲ್ಲಿದ್ದ ಮಹಿಳೆಯರ ಸಮಾನತೆ, ಸ್ವಾತಂತ್ರ್ಯ ಮತ್ತು ಶಿಕ್ಷಣ ಉತ್ತರ ವೇದಗಳ ಕಾಲದಲ್ಲಿ ಮಾಯವಾಗಿತ್ತು! ಏಕೆಂದರೆ ಮನುವಿನ ಮನುಸ್ಮೃತಿ ಎಂಬ ಗ್ರಂಥವು ಅಂದಿನ ಹಿಂದೂ ವೈದಿಕ ಧರ್ಮದ ಮೂಲ ಗ್ರಂಥವಾಗಿತ್ತು. ಆದರೆ ಈ ಗ್ರಂಥದ ಮೂಲಕ ಪಿತೃ ಪ್ರಧಾನ ರೂಢಿಗಳು ಮತ್ತು ಅಧೀನತೆಯನ್ನು ಸಮರ್ಥಿಸಿಕೊಳ್ಳಲಾಯಿತು ಹಾಗೂ ಮಹಿಳೆಯರಿಗೆ ಶಿಕ್ಷಣ, ಮದುವೆ, ಆಸ್ತಿಯ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಯಿತು ಮತ್ತು ಬಲವಂತವಾಗಿ ಅವುಗಳನ್ನು ನಿರಾಕರಿಸಲಾಯಿತು. ಬಾಲ್ಯ ವಿವಾಹ, ಸತಿ ಪದ್ಧತಿ, ಬಲವಂತದ ವಿಧವೆಯತ್ವ ಮತ್ತು ಉತ್ತರಾಧಿಕಾರ ಹಕ್ಕುಗಳ ನಿರಾಕರಣೆಯಂತಹ ಲಿಂಗ ಅಸಮಾನತೆಯನ್ನು ಶಾಶ್ವತಗೊಳಿಸಿದವು. ಮಹಿಳೆಯರಲ್ಲಿ ಹೆಚ್ಚಾಗಿ ಶಿಕ್ಷಣವು ಮೇಲ್ವರ್ಗದವರಿಗೆ ಸೀಮಿತವಾಗಿತ್ತು ಹಾಗೂ ಅವರ ಪರಿಸ್ಥಿತಿ ಏನು ತೀರಾ ಭಿನ್ನವಿರಲಿಲ್ಲ. 12ನೇ ಶತಮಾನದಲ್ಲಿ ಬಸವೇಶ್ವರರು ಮತ್ತು ಆಧುನಿಕ ಕಾಲದಲ್ಲಿ ಫುಲೆ ದಂಪತಿಗಳು ಮತ್ತು ನಾಲ್ವಡಿಯವರು ಹಾಗೂ ಕೊಲ್ಲಾಪುರದ ಶಾಹೂ ಮಹಾರಾಜರಂತಹ ಮಹಾನ್ ವ್ಯಕ್ತಿಗಳ ಅಪಾರ ಸುಧಾರಣಾ ಪ್ರಯತ್ನದ ನಂತರವೂ ಕೂಡ ಮಹಿಳೆ ಎಂಬ ಕಾರಣಕ್ಕೆ ಮಹಿಳೆಯರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿತ್ತು.

**ಮಹಿಳಾ ವಿಮೋಚನೆಯತ್ತ ಡಾ. ಬಿ. ಆರ್. ಅಂಬೇಡ್ಕರ್ ರವರ ತತ್ವ ಸಿದ್ಧಾಂತ**

ಭಾರತದ ಇತಿಹಾಸದ ಸಮಗ್ರ ಅಧ್ಯಯನ ಮಾಡಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಮಹಿಳೆಯರ ಸ್ಥಿತಿಗತಿಯು ಅಸ್ಪೃಶ್ಯರಿಗಿಂತ ಭಿನ್ನವಾಗಿ ಇಲ್ಲವೆಂದು ಪರಿಗಣಿಸಿ, ಮಾನವ ಪ್ರಗತಿಗೆ ಮಹಿಳೆಯರ ವಿಮೋಚನೆ ಅತ್ಯಗತ್ಯ ಎಂದು ಅಂಬೇಡ್ಕರ್ ಭಾವಿಸಿದ್ದರು. ಲಿಂಗ ನ್ಯಾಯವು ಸಾಮಾಜಿಕ ಪ್ರಜಾಪ್ರಭುತ್ವದಿಂದ ಬೇರ್ಪಡಿಸಲಾಗದದ್ದು ಎಂದು ಅವರು ದೃಢವಾಗಿ ನಂಬಿದ್ದರು. ಅವರ ದೃಷ್ಟಿಕೋನವು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳೊಂದಿಗೆ ಹೊಂದಿಕೆಯಾಯಿತು; ನಂತರ ಅವುಗಳನ್ನೇ ಭಾರತೀಯ ಸಂವಿಧಾನದಲ್ಲಿ ಅಳವಡಿಸಲಾಯಿತು. ಅಂಬೇಡ್ಕರ್ ರವರ ದೃಷ್ಟಿಕೋನವು ನಿಜವಾಗಿಯೂ ಸಬಲೀಕರಣವನ್ನು ಸಾಧಿಸಲು ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಭಾಗವಹಿಸುವಿಕೆಯಲ್ಲಿ

ಸಮಾನ ಪ್ರವೇಶ ಇರಬೇಕೆಂದು ಒತ್ತಿ ಹೇಳಿತು.

**ಡಾ. ಬಿ. ಆರ್. ಅಂಬೇಡ್ಕರ್ ಮಹಿಳೆಯರಿಗಾಗಿ ಮಾಡಿದ ಸಾಮಾಜಿಕ ಸುಧಾರಣೆಗಳು**

ಡಾ. ಬಿ. ಆರ್. ಅಂಬೇಡ್ಕರ್ ರವರು ಮೊಟ್ಟ ಮೊದಲು ಮಾಡಿದ ಮತ್ತು ಬಯಸಿದ ಸಾಮಾಜಿಕ ಸುಧಾರಣೆ ಎಂದರೆ ಅದುವೇ ಸಮಾನತೆ. ಲಿಂಗಭೇದ, ಜಾತಿಭೇದಗಳಿಲ್ಲದೇ ಎಲ್ಲರಿಗೂ ಸಮಾನತೆಯನ್ನು ಪ್ರತಿಪಾದಿಸಿದರು. 1926 ರಿಂದ 1937 ರವರೆಗೆ ಬಾಂಬೆ ಶಾಸಕಾಂಗ ಮಂಡಳಿಯ ಸದಸ್ಯರಾಗಿ ಮಹಿಳೆಯರ ಜೀವನ ಸುಧಾರಣೆಗಾಗಿ ಹಲವಾರು ಕ್ರಮಗಳನ್ನು ತಂದರು. ಅವರು ಕಾರ್ಮಿಕರಾಗಿ ದುಡಿಯುವ ಮಹಿಳೆಯರಿಗೆ ವೇತನ ರಚನೆ ಮತ್ತು ಹೆರಿಗೆ ಸೌಲಭ್ಯವನ್ನು ನೀಡಿದರು ಮತ್ತು ಪುರುಷರಿಗೆ ಸಮಾನವಾದ ವೇತನವನ್ನು ಪ್ರತಿಪಾದಿಸಿದರು, ಹಾಗೂ ಮಹಿಳಾ ಕಾರ್ಮಿಕರ ಆರೋಗ್ಯ ಮತ್ತು ಕಲ್ಯಾಣ ರಕ್ಷಿಸುವುದು ಉದ್ಯೋಗದಾತರ ನೈತಿಕ ಕರ್ತವ್ಯ ಎಂದು ವಾದಿಸಿದರು. ಗಣಿಗಾರಿಕೆಯಂತಹ ಕೈಗಾರಿಕೆಗಳಲ್ಲಿ ಮಹಿಳೆಯರ ಮೇಲಾಗುವ ಶೋಷಣೆಯನ್ನು ರದ್ದುಗೊಳಿಸಬೇಕೆಂದು ಅವರು ಪ್ರತಿಪಾದಿಸಿದರು. ಹಾಗೂ ತಮ್ಮ 'ಮೂಕ ನಾಯಕ' ಪತ್ರಿಕೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರು ಮಹಿಳೆಯರು ತಮ್ಮನ್ನು ತಾವು ಶಿಕ್ಷಣ ಪಡೆಯಲು ಮತ್ತು ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. 1942 ರಲ್ಲಿ ಮಹಿಳಾ ಸಮ್ಮೇಳನದಂತಹ ಕಾರ್ಯಕ್ರಮಗಳನ್ನು ಆಯೋಜಿಸಿದರು; ಅಲ್ಲಿ ಅವರು ಮಹಿಳೆಯರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಮತ್ತು ವರದಕ್ಷಿಣೆ ಹಾಗೂ ಬಾಲ್ಯ ವಿವಾಹದಂತಹ ಸಾಮಾಜಿಕ ದುಷ್ಕೃತ್ಯಗಳ ವಿರುದ್ಧ ಹೋರಾಡಲು ಒತ್ತಾಯಿಸಿದರು. ಆದ್ದರಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರಯತ್ನಗಳು ಅಂಚಿನಲ್ಲಿರುವ ಸಮುದಾಯಗಳ ಅನೇಕ ಮಹಿಳೆಯರನ್ನು ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸಲು ಪ್ರೇರೇಪಿಸಿದವು.

**ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮಹಿಳಾ ಸಬಲೀಕರಣ ಬಾಬಾ ಸಾಹೇಬರ ದೃಷ್ಟಿಯಲ್ಲಿ**

ಆರ್ಥಿಕ ಮತ್ತು ಶೈಕ್ಷಣಿಕ ಸಬಲೀಕರಣವಿಲ್ಲದೆ ಸಾಮಾಜಿಕ ಮತ್ತು ಕಾನೂನು ಸಮಾನತೆ ಅಪೂರ್ಣ ಎಂದು ವಾದಿಸಿದರು. ಆದ್ದರಿಂದ ಪ್ರತಿಯೊಬ್ಬ ಮಹಿಳೆಯು ಶಿಕ್ಷಣವನ್ನು ಪಡೆದುಕೊಂಡು ತನ್ನನ್ನು ತಾನು ಆರ್ಥಿಕವಾಗಿ ಸಬಲೀಕರಣಗೊಳಿಸಿಕೊಂಡು ಸ್ವಾವಲಂಬಿ, ಸ್ವಾತಂತ್ರ್ಯ ಜೀವನ ನಡೆಸಲು ಬಾಬಾ ಸಾಹೇಬರು ಕರೆಕೊಟ್ಟರು. ಏಕೆಂದರೆ ಶಿಕ್ಷಣವು ಸಾಮಾಜಿಕ ಅನ್ಯಾಯದ ವಿರುದ್ಧದ ದೊಡ್ಡ ಅಸ್ತ್ರ ಎಂದು ಅವರು ನಂಬಿದ್ದರು. ಆದ್ದರಿಂದಲೇ ಅವರು "ಶಿಕ್ಷಣವೆಂಬುದು ಹುಲಿಯ ಹಾಲಿದ್ದಂತೆ, ಅದನ್ನು ಕುಡಿದವರು ಘರ್ಜಿಸದೇ ಇರಲಾರರು" ಎಂದು ಹೇಳಿದ್ದು ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಆದ್ದರಿಂದಲೇ ಅವರ ವಾಣಿಯಂತೆ 'ಶಿಕ್ಷಿತರಾಗಿ, ಹೋರಾಡಿ ಮತ್ತು ಸಂಘಟಿತರಾಗಿ' ಎಂಬುದು ಕೇವಲ ಘೋಷಣೆಯಾಗಿರಲಿಲ್ಲ; ಬದಲಿಗೆ ಜ್ಞಾನದೊಂದಿಗೆ ಏಕತೆ ಮತ್ತು ಒಗ್ಗಟ್ಟು ಇದರ ಮೂಲ ಮಂತ್ರವಾಗಿತ್ತು, ಅದೇ ಅವರ ವಿಮೋಚನೆಗೆ ದಾರಿಯಾಗಿತ್ತು. ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿನಿಲಯ ಸೌಲಭ್ಯ ಹಾಗೂ ಸಾರ್ವಜನಿಕ ಚಳುವಳಿಗಳಲ್ಲಿ ಭಾಗವಹಿಸಲು ಅವರನ್ನು ಪ್ರೋತ್ಸಾಹಿಸುವ ಮೂಲಕ ಅವರು ಮಹಿಳಾ ಶಿಕ್ಷಣವನ್ನು ಉತ್ತೇಜಿಸಿದರು.

**ಮಹಿಳಾ ಸಬಲೀಕರಣದಲ್ಲಿ ಸಂವಿಧಾನದ ಮೂಲಕ ಡಾ. ಬಿ. ಆರ್. ಅಂಬೇಡ್ಕರ್ ಅವರ ಪಾತ್ರ**

ಮಹಿಳಾ ಸಬಲೀಕರಣದ ಪ್ರಸ್ತಾಪ ಬಂದಾಗ ಅದರ ಅತ್ಯುತ್ತಮ ಮತ್ತು ಶಾಶ್ವತ

ಉದಾಹರಣೆ ಭಾರತೀಯ ಸಂವಿಧಾನದಲ್ಲಿದೆ. ಕರಡು ಸಮಿತಿಯ ಅಧ್ಯಕ್ಷರಾಗಿ ಬಾಬಾ ಸಾಹೇಬರು, ಸಂವಿಧಾನವು ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ಖಾತರಿಪಡಿಸುತ್ತದೆ ಎಂದು ಅವರು ತಿಳಿಸಿದರು. ಸಂವಿಧಾನದ 14, 15 ಮತ್ತು 16ನೇ ವಿಧಿಗಳು ಕಾನೂನಿನ ಮುಂದೆ ಎಲ್ಲರೂ ಸಮಾನರು, ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ ಮತ್ತು ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶದ ತತ್ವವನ್ನು ಪ್ರತಿಪಾದಿಸಿದವು. ಹಾಗೂ ಸಂವಿಧಾನದ ವಿಧಿ 36 ರಿಂದ 51 ರವರೆಗೆ ಅನೇಕ ರಾಜ್ಯ ನಿರ್ದೇಶಕ ತತ್ವಗಳ ಮೂಲಕ ಮಹಿಳೆಯರಿಗೆ ವಿಶೇಷ ಸೌಲಭ್ಯ ನೀಡಿದರು ಹಾಗೂ ಪ್ರಮುಖವಾಗಿ ಸಮಾನ ವೇತನ, ಆರೋಗ್ಯ ರಕ್ಷಣೆ ಮತ್ತು ಹೆರಿಗೆ ಸೌಲಭ್ಯ– ಹೀಗೆ ಸಂವಿಧಾನವು ಲಿಂಗ ಸಮಾನತೆಯ ಸಾಧನವಾಯಿತು. ಇದಷ್ಟೇ ಅಲ್ಲದೆ ಇನ್ನು ಅನೇಕ ಕಾಯ್ದೆ ಕಾನೂನುಗಳ ಮುಖಾಂತರ ಮಹಿಳೆಯರು ಸಮಾಜದಲ್ಲಿ ಸಬಲರಾಗಿ, ಪ್ರಬಲರಾಗಿ ಸ್ವಾವಲಂಬಿ ಜೀವನ ನಡೆಸುವ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿದರು. ಅದರಲ್ಲೂ ಪ್ರಮುಖವಾಗಿ ಸಂವಿಧಾನಬದ್ಧವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಒದಗಿಸುವ ಮೂಲಕ ಅವರ ರಾಜಕೀಯ ಜೀವನಕ್ಕೆ ಕಾರಣವಾದರು. ಮತ್ತು ಒಂದು ಹೆಣ್ಣು ಹುಟ್ಟಿರುವುದೇ ಮನೆಯ ಕೆಲಸ ಮಾಡಲಿಕ್ಕೆ ಎಂಬ ಮನಸ್ಥಿತಿಯ ಭಾರತದಲ್ಲಿ ಇಂದು ಮಹಿಳೆಯರು ಐಎಎಸ್, ಐಪಿಎಸ್ ಅಧಿಕಾರಿ ಮಾತ್ರವಲ್ಲದೆ ಈ ದೇಶದ ರಾಷ್ಟ್ರಪತಿಯೂ ಆಗಬಹುದು ಎಂದು ಬಾಬಾ ಸಾಹೇಬರು ಸಂವಿಧಾನದ ಮೂಲಕ ತೋರಿಸಿಕೊಟ್ಟರು. ಭಾರತವನ್ನು ಆಳಿದ ಬ್ರಿಟಿಷರಿಗಿಂತ ಮುಂಚಿತವಾಗಿ ಭಾರತದಲ್ಲಿ ಸಂವಿಧಾನದ ಮೂಲಕ ಮಹಿಳೆಯರಿಗೂ ಸಹ ಮತದಾನದ ಹಕ್ಕನ್ನು ನೀಡಿದರು. ಒಟ್ಟಾರೆಯಾಗಿ ಇಂದಿನ ನಮ್ಮ ಸಂವಿಧಾನವು ಮಹಿಳೆಯರ ಹಕ್ಕುಗಳ ರಕ್ಷಣೆಯ ಮೂಲಕ ಲಿಂಗ ಅಸಮಾನತೆಯನ್ನು ತೊಡೆದು ಹಾಕಿದೆ.

**ಹಿಂದೂ ಕೋಡ್ ಬಿಲ್ ಮತ್ತು ಮಹಿಳೆಯರ ಕಾನೂನು ಹಕ್ಕುಗಳು**

ಇಂದಿಗೂ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದ ಒಂದು ಪ್ರಮುಖ ಮಹಿಳಾ ಸಬಲೀಕರಣಕ್ಕೆ ಡಾ. ಬಿ. ಆರ್. ಅಂಬೇಡ್ಕರ್ ರವರ ಅತ್ಯಂತ ನೇರ ಮತ್ತು ವಿವಾದಾತ್ಮಕ ಕೊಡುಗೆ ಎಂದರೆ ಅದುವೇ 'ಹಿಂದೂ ಕೋಡ್ ಬಿಲ್ (1948–1951)' ರಚಿಸುವಲ್ಲಿನ ಅವರ ಪಾತ್ರ. ಏಕೆಂದರೆ ಈ ಮಸೂದೆಯು ಮಹಿಳೆಯರಿಗೆ ಮದುವೆ, ವಿಚ್ಛೇದನ, ದತ್ತು ಮತ್ತು ಉತ್ತರಾಧಿಕಾರದ ಹಕ್ಕು ಹಾಗೂ ಆಸ್ತಿಯ ಹಕ್ಕುಗಳಂತಹ ಸಮಾನ ಹಕ್ಕುಗಳನ್ನು ನೀಡುವ ಮೂಲಕ ಹಿಂದೂ ವೈಯಕ್ತಿಕ ಕಾನೂನನ್ನು ಸುಧಾರಿಸುವ ಗುರಿಯನ್ನು ಹೊಂದಿತ್ತು; ಆದರೆ ಇವೆಲ್ಲ ವಿಷಯಗಳು ಪಿತೃ ಪ್ರಧಾನ ಪ್ರಬಲತೆಯನ್ನು ಹೊಂದಿದ್ದವು. ಆದ್ದರಿಂದ ಡಾ. ಬಿ. ಆರ್. ಅಂಬೇಡ್ಕರ್ ಈ ಸುಧಾರಣೆಯನ್ನು "ಸಾಮಾಜಿಕ ಶಾಸನದಲ್ಲಿ ಒಂದು ಕ್ರಾಂತಿ" ಎಂದು ಪರಿಗಣಿಸಿದರು. ಮಹಿಳೆಯರು ಸಹ ಪುರುಷರ ಸಮನಾಗಿ ಸ್ವಾತಂತ್ರ್ಯ, ಕಾನೂನು ಸ್ಥಾನಮಾನ ಮತ್ತು ತಮ್ಮ ಜೀವನ ಸಂಗಾತಿ ಆಯ್ಕೆ ಮತ್ತು ಆಸ್ತಿಯನ್ನು ಅನುವಂಶಿಕವಾಗಿ ಪಡೆಯುವ ಮತ್ತು ದಬ್ಬಾಳಿಕೆಯ ವಿವಾಹಗಳನ್ನು ವಿಸರ್ಜಿಸುವ ಹಕ್ಕನ್ನು ಪ್ರತಿಯೊಬ್ಬ ಮಹಿಳೆ ಹೊಂದಿರಬೇಕು ಎಂದು ಅವರು ವಾದಿಸಿದರು. ಆದರೆ ದುರ್ದೈವವೆಂದರೆ ಅಂದಿನ ಸಂಪ್ರದಾಯವಾದಿ ಬ್ರಾಹ್ಮಣ್ಯ ಮನಸ್ಥಿತಿಯ ಇಡೀ ಸಂಸತ್ತು ಇದನ್ನು ವಿರೋಧಿಸಿತು. ಆದರೆ ಛಲ ಬಿಡದ ಬಾಬಾ ಸಾಹೇಬರು ಭಾರತದ ಪ್ರತಿಯೊಬ್ಬ ಮಹಿಳೆಯ ಪರವಾಗಿ ಇದನ್ನು ಬಲವಾಗಿ ವಾದಿಸಿದರು. ಆದರೆ ಸಂಪ್ರದಾಯವಾದಿ ಮನುವಾದಿ ಮನಸ್ಥಿತಿಯ ರಾಜಕಾರಣಿಗಳ ಪ್ರಭಾವದಿಂದಾಗಿ ಮಸೂದೆಯನ್ನು ನಿರ್ಬಂಧಿಸಲಾಯಿತು. ಆದ್ದರಿಂದ ಈ

ಘಟನೆ ತಮ್ಮ ಸಮಾನತೆಯ ಸಿದ್ಧಾಂತಕ್ಕೆ ಧಕ್ಕೆ ತಂದಿತೆಂಬ ಕಾರಣಕ್ಕೆ ಬಾಬಾ ಸಾಹೇಬರು 1951 ಸೆಪ್ಟೆಂಬರ್ 27 ರಂದು ತಮ್ಮ ಕಾನೂನು ಸಚಿವ ಸ್ಥಾನಕ್ಕೆ ಆ ಕ್ಷಣದಲ್ಲೇ ರಾಜೀನಾಮೆ ಕೊಟ್ಟು ಹೊರಬಂದರು. ಇದು ಅವರ ಸಿದ್ಧಾಂತದ ಬದ್ಧತೆಯನ್ನು ತೋರಿಸುತ್ತದೆ ಮತ್ತು ಮಹಿಳೆಯರ ಪರವಾಗಿ ಸಚಿವ ಸ್ಥಾನವನ್ನೇ ತ್ಯಜಿಸಿದ ಏಕೈಕ ವ್ಯಕ್ತಿ ಡಾ. ಬಿ. ಆರ್. ಅಂಬೇಡ್ಕರ್ ರವರು ಮಾತ್ರ. ಆದ್ದರಿಂದ ಭಾರತದ ಪ್ರತಿಯೊಂದು ಹೆಣ್ಣು ಮಗು ಬಾಬಾ ಸಾಹೇಬರ ಈ ತ್ಯಾಗವನ್ನು ಮರೆಯಬಾರದು. ನಂತರ ಅದರ ಮುಂದುವರಿದ ಭಾಗವಾಗಿ ಆ ಮಸೂದೆಯಲ್ಲಿನ ಹಲವಾರು ಅಂಶಗಳನ್ನು ಒಂದೊಂದಾಗಿ ನೆಹರೂರವರು ಜಾರಿಗೆ ತಂದರು. ಅವುಗಳಲ್ಲಿ ಪ್ರಮುಖವಾಗಿ ಹಿಂದೂ ವಿವಾಹ ಕಾಯ್ದೆ (1955), ಹಿಂದೂ ಉತ್ತರಾಧಿಕಾರ ಕಾಯ್ದೆ (1956), ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ (1956)– ಇವೆಲ್ಲವೂ ಅವರ ಮೂಲ ಕರಡಿನ ಮೂಲಕ ಹುಟ್ಟಿಕೊಂಡಿವೆ. ನಂತರ ಇವು ಭಾರತೀಯ ಮಹಿಳೆಯರ ಸ್ಥಾನಮಾನದಲ್ಲಿ ಪ್ರಮುಖ ತಿರುವು ನೀಡಿದವು.

**ಆಧುನಿಕ ಭಾರತದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪ್ರಸ್ತುತತೆ**

ಸಮಕಾಲೀನ ಭಾರತದಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಅಂಬೇಡ್ಕರ್ ಅವರ ದೃಷ್ಟಿಕೋನವು ಅತ್ಯಂತ ಪ್ರಸ್ತುತವಾಗಿದೆ. ಸಾಂವಿಧಾನಿಕ ಖಾತರಿಬದ್ಧ ಹಕ್ಕುಗಳ ಹೊರತಾಗಿಯೂ ಲಿಂಗ ಅಸಮಾನತೆಯು ಇಂದಿಗೂ ಹಲವು ರೂಪಗಳಲ್ಲಿ ಅಸಮಾನವಾಗಿಯೇ ಇದೆ; ಲಿಂಗ ಆಧಾರಿತ ಹಿಂಸೆ ಮತ್ತು ರಾಜಕೀಯ ಭಾಗವಹಿಸುವಿಕೆಯ ಕೊರತೆ ಮುಂದುವರೆದಿದೆ. ಆದ್ದರಿಂದ ಸಾಮಾಜಿಕ ಪ್ರಜಾಪ್ರಭುತ್ವ, ಶಿಕ್ಷಣ ಮತ್ತು ಕಾನೂನು ಸಮಾನತೆಯ ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ಇದು ಒಂದು ಮಾರ್ಗ ಒದಗಿಸುತ್ತದೆ. ಬಾಬಾ ಸಾಹೇಬರು ಹೇಳಿದಂತೆ "ಸಮಾನತೆ ಇಲ್ಲದ ಸ್ವಾತಂತ್ರ್ಯ ಅರ್ಥಹೀನ" ಎಂಬಂತೆ, ಮಹಿಳಾ ಸಬಲೀಕರಣವು ಸಾಂಕೇತಿಕವಾಗಿ ಅಲ್ಲ, ರಚನಾತ್ಮಕವಾಗಿ ಬೇರೂರಬೇಕು ಎಂದು ಪ್ರತಿಪಾದಿಸಿದರು.

**ಉಪಸಂಹಾರ**

ಒಟ್ಟಾರೆಯಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಹಿಳಾ ಸಬಲೀಕರಣಕ್ಕೆ ನೀಡಿದ ಕೊಡುಗೆಗಳು ಭಾರತೀಯ ಸಮಾಜದ ನೈತಿಕ ಮತ್ತು ಕಾನೂನು ಅಡಿಪಾಯಗಳನ್ನು ಪರಿವರ್ತಿಸಿದವು. ಪಿತೃ ಪ್ರಭುತ್ವ, ಜಾತಿ ದಬ್ಬಾಳಿಕೆ ಮತ್ತು ಮೂಢ ಆಚರಣೆಗಳ ಮೂಲಕ ಮಹಿಳೆಯರ ಶೋಷಣೆಯ ವಿರುದ್ಧ ಅವರ ನಿರಂತರವಾದ ಹೋರಾಟದ ಮೂಲಕ ಅವರು ಸಮಾನತೆಯ ಅರ್ಥವನ್ನು ಇಡೀ ಜಗತ್ತಿಗೆ ತಿಳಿಸಿದರು. ಶಾಸಕಾಂಗವಾಗಿ ಅವರು ಮಾಡಿದ ಕೆಲಸ, ಸಂವಿಧಾನದ ತತ್ವ ಮತ್ತು ಸ್ತ್ರೀವಾದಿ ದೃಷ್ಟಿಕೋನವು ಭಾರತದಲ್ಲಿ ಆಧುನಿಕ ಲಿಂಗ ಸಮಾನತೆಯ ಅಡಿಪಾಯ ಹಾಕಿತು. ರಾಷ್ಟ್ರದ ಪ್ರಗತಿಗೆ ಮಹಿಳಾ ವಿಮೋಚನೆ ಅತ್ಯಗತ್ಯ ಎಂಬ ಅವರ ನಂಬಿಕೆ ಪ್ರತಿಧ್ವನಿಸುತ್ತಲೇ ಇದೆ. ಆದ್ದರಿಂದಲೇ ಇತ್ತೀಚೆಗೆ 'ನಾರಿ ಶಕ್ತಿ ವಂದನ' ಎಂಬ 107ನೇ ತಿದ್ದುಪಡಿ ಮೂಲಕ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡುವ ಮೂಲಕ ಮಹಿಳೆಯರ ರಾಜಕೀಯ ಬಲ ಹೆಚ್ಚಿಸುವುದರಿಂದ ಅವರ ಹಕ್ಕುಗಳಿಗೆ ರಕ್ಷಣೆ ಒದಗಿಸುತ್ತದೆ ಮತ್ತು ಬಾಬಾ ಸಾಹೇಬರ ಕನಸಾದ ಎಲ್ಲರನ್ನೊಳಗೊಂಡ ನ್ಯಾಯಯುತ ಸಮಾಜಕ್ಕೆ ಮಾರ್ಗದರ್ಶಕ ಬೆಳಕಾಗಿ ಉಳಿದಿದೆ.

## ಪರಾಮರ್ಶನ ಗ್ರಂಥಗಳು:


1. Dr. B. R. Ambedkar speech and writings published by Karnataka government
2. Ambedkar, B. R. (1916). Castes in India: Their Mechanism, Genesis and Development, Indian Antiquary, Vol. 41
3. Ambedkar, B. R. (1949). Speech in the Constituent Assembly of India. New Delhi: Government of India.
4. Ambedkar, B. R. (1951). The Hindu Code Bill. Government of India, Parliamentary Debates.
5. Ambedkar, B. R. (1957). The Rise and Fall of Hindu Women. In Dr. Babasaheb Ambedkar: Writings and Speeches, Vol. 3.
6. Guru, G. (1995). Dalit Women Talk Differently. Economic and Political Weekly, 30(41/42), 2548–2550.
7. Keer, D. (1990). Dr. Babasaheb Ambedkar: Life and Mission. Popular Prakashan.
8. Omvedt, G. (1994). Dalits and the Democratic Revolution: Dr. Ambedkar and the Dalit Movement in Colonial India. Sage Publications
9. Rege, S. (2013). Against the Madness of Manu: B. R. Ambedkar's Writings on Brahmanical Patriarchy. Navayana.
10. Thorat, S. (2011). Ambedkar's Vision of Social Justice. Indian Journal of Labour Economics, 54(2), 239–248.
11. Zelliot, E. (2004). From Untouchable to Dalit: Essays on the Ambedkar Movement, Manohar Publications.